ಶ್ರೀ.ಡಿ. ಮಂಜುನಾಥ ಉನ್ನತ ಶಿಕ್ಷಣ ಸಚಿವರು.

ಅ) 8 ನೌಕರರು ರಾಜ್ಯ ವೇತನ ಶ್ರೇಣಿ ರೂ.3,300–6,300 ವೇತನ ಶ್ರೇಣಿ ಪಡೆಯುತ್ತಿದ್ದಾರೆ. ಎ.ಐ.ಸಿ.ಟಿ.ಇ ವೇತನ ಶ್ರೇಣಿ ಈವರೆಗೂ ನೀಡಿಲ್ಲ.

ಆ) ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್, ದೈಹಿಕ ಶಿಕ್ಷಕರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿ ಈವರೆಗೂ ನೀಡಿಲ್ಲ. ಎ.ಐ.ಸಿ.ಟಿ.ಇ ನಿಯಮಗಳಲ್ಲಿ ಪಾಲಿಟೆಕ್ನಿಕ್‌ನ ದೈಹಿಕ ಶಿಕ್ಷಕರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿ ನೀಡಲು ಅವಕಾಶವಿರುವುದಿಲ್ಲ.

5035 (5051) ಶ್ರೀ ಕೃಷ್ಣಮೂರ್ತಿ. ಕೆ.ಎಂ. (ಕಡೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

01. ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ನೇಮಕಾತಿ ಮಾಡಲು ಆರ್ಥಿಕ ಮಿತವ್ಯಯ ಅನ್ವಯಿಸುತ್ತದೆಯೇ;

02. ಅನ್ವಯಿಸದಿದ್ದರೆ ಈ ಬಗ್ಗೆ ನೇಮಕಾತಿ ಮಾಡಲು ಆದೇಶ ಮಾಡಲಾಗಿದೆಯೇ;

03. ಹಾಗಿದ್ದಲ್ಲಿ ಆದೇಶದ ವಿವರ ನೀಡುವುದು ;

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

01. ಆರ್ಥಿಕ ಇಲಾಖೆಯ, ಮಿತವ್ಯಯಕ್ಕೆ ಸಂಬಂಧಿಸಿದ ದಿನಾಂಕ: 05–07–2004ರ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 02 ಬಿಇಎಂ 2003ರ ಪ್ರಕಾರ ಈ ಕೆಳಗೆ ಉದ್ಧರಿಸಿದಂತೆ ನಿಷೇಧವನ್ನು ವಿಧಿಸಲಾಗಿದೆ.

'(h) The ban on recruitment/creation and filling up of posts also covers all grant-in aid institutions

(i) All the existing vacant posts or those falling vacant under grant-in-aid institutions should remain vacant without exception until further orders.'

ಅದಕ್ಕೆ ಪೂರ್ವದಲ್ಲಿ ಆರ್ಥಿಕ ಇಲಾಖೆಯ ದಿನಾಂಕ: 17–01–04ರ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2004ರ ಪ್ರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ದಿನಾಂಕ: 31–01–95ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಪ್ರಕಾರ ಪ್ರತ್ಯಾಯೋಜಿಸಲಾದ ನೇಮಕಾತಿಗಳನ್ನು ಅನುಮೋದನೆ ಮಾಡುವ ಅಧಿಕಾರವನ್ನು ಸರ್ಕಾರ ಹಿಂತೆಗೆದುಕೊಂಡಿರುತ್ತದೆ.

02.03. ಈ ನಿರ್ಬಂಧವನ್ನು ಸಡಿಲಿಸಲು ಪರಿಶೀಲಿಸಲಾಗುವುದು ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ದಿನಾಂಕ: 30–06–2005ರಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿರುತ್ತಾರೆ.

5036 (5137) ಶ್ರೀ ಕೃಷಮೂರ್ತಿ.ಕೆ.ಎಂ. (ಕಡೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

01. ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ (ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಅಡ್ಡಿಯಾಗಿರುವುದು ನಿಜವೇ ;

02. ಹಾಗಿದ್ದರೆ ಇದರಿಂದ ಬೋಧನೆಗೆ ತೊಂದರೆಯಾಗಿರುವುದು ನಿಜವಲ್ಲವೇ ;

03. ಹಾಗಿದ್ದರೆ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು;

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

01. ಆರ್ಥಿಕ ಇಲಾಖೆಯ, ಮಿತವ್ಯಯಕ್ಕೆ ಸಂಬಂಧಿಸಿದ ದಿನಾಂಕ : 05–07–2004ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 02 ಬಿಇಎಂ 2003ರ ಪ್ರಕಾರ ಈ ಕೆಳಗೆ ಉದ್ಧರಿಸಿದಂತೆ ನಿಷೇಧವನ್ನು ವಿಧಿಸಲಾಗಿದೆ.

'(h) The ban on recruitment/creation and filling up of posts also covers all grant-in-aid institutions

(i) All the existing vacant posts or those falling vacant under grant-in-aid institutions should remain vacant without exeption until further orders.'

ಅದಕ್ಕೆ ಪೂರ್ವದಲ್ಲಿ ಆರ್ಥಿಕ ಇಲಾಖೆಯ ದಿನಾಂಕ: 17–01–04ರ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2004ರ ಪ್ರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ದಿನಾಂಕ : 31–01–95ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಪ್ರಕಾರ ಪ್ರತ್ಯಾಯೋಜಿಸಲಾದ ನೇಮಕಾತಿಗಳನ್ನು ಅನುಮೋದನೆ ಮಾಡುವ ಅಧಿಕಾರವನ್ನು ಸರ್ಕಾರ ಹಿಂತೆಗೆದುಕೊಂಡಿರುತ್ತದೆ.

02.(03) ಈ ನಿರ್ಬಂಧವನ್ನು ಸಡಿಲಿಸಲು ಪರಿಶೀಲಿಸಲಾಗುವುದು ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ದಿನಾಂಕ : 30–06–2005ರಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿರುತ್ತಾರೆ.

5037 (5138) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :– ಮಾನ್ಯ ವಸತಿ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ಹೊಸದಾಗಿ ಹೊಂದಲಾಗಿರುವ ವಸತಿ ಗುರಿ ಏನು?

ಆ) ಇದರಲ್ಲಿ, ಕಡೂರು ತಾಲ್ಲೂಕಿಗೆ ನಿಗದಿ ಮಾಡಿದ ಗುರಿ ಎಷ್ಟು ?

ಇ) ಆಶ್ರಯ ಸಮಿತಿ ರಚನೆ ಮಾಡದಿರಲು ಕಾರಣವೇನು;

ಶ್ರೀ ಅಂಜನಮೂರ್ತಿ ವಸತಿ ಸಚಿವರು.

ಅ) 2005–06ರಲ್ಲಿ ಸರ್ಕಾರವು ಆಶ್ರಯ ಅಂಬೇಡ್ಕರ್ ಯೋಜನೆಗಳಡಿ ಹೊಸ ಗುರಿಯನ್ನು ನೀಡಿಲ್ಲ. ಆದರೆ 2005–06ರಲ್ಲಿ 2,75,802 ಬ್ಯಾಕ್‌ಲಾಗ್ ಮನೆಗಳ ಪೈಕಿ 1,25,000 ಮನೆಗಳನ್ನು ಪೂರ್ತಿಗೊಳಿಸುವ ಗುರಿಯನ್ನು ಹೊಂದಿದ್ದು, ಏಪ್ರಿಲ್ ಮತ್ತು ಮೇ 2005ರಲ್ಲಿ 12,333 ಮನೆಗಳನ್ನು ಪೂರ್ಣಗೊಳಿಸಲಾಗಿದೆ.

ಕೇಂದ್ರ ಸರ್ಕಾರ ಪುರಸ್ಕೃತ ಇಂದಿರಾ ಆವಾಸ್ ಯೋಜನೆಯಡಿ 2005–06ರಲ್ಲಿ 52848 ಮನೆಗಳ ಗುರಿಯನ್ನು ನೀಡಲಾಗಿದ್ದು, 01.06.2005ರಲ್ಲಿದ್ದಂತೆ 2823 ಮನೆಗಳನ್ನು ಪೂರ್ಣಗೊಳಿಸಿದೆ.

ಆ) 2005–06 ಸಾಲಿನಲ್ಲಿ ರಾಜ್ಯ ಸರ್ಕಾರದ ಯೋಜನೆಗಳಡಿಯಲ್ಲಿ ಯಾವುದೇ ಗುರಿಯನ್ನು ನೀಡದೇ ಇರುವುದರಿಂದ ಕಡೂರು ತಾಲ್ಲೂಕಿಗೆ ಕೂಡ ಹೊಸ ಮನೆಗಳ ಗುರಿಯನ್ನು ನೀಡಿರುವುದಿಲ್ಲ. ಆದರೆ ಕಡೂರು ತಾಲ್ಲೂಕಿನಲ್ಲಿ ಬ್ಯಾಕಲಾಗ್ ಮನೆಗಳನ್ನು ಪೂರ್ಣಗೊಳಿಸಲಾಗುತ್ತಿದ್ದು ಅವುಗಳಲ್ಲಿ 01.06.2005ರಲ್ಲಿರುವಂತೆ 41 ಮನೆಗಳನ್ನು ಪೂರ್ಣಗೊಳಿಸಲಾಗಿದೆ.

ಕೇಂದ್ರ ಸರ್ಕಾರ ಪುರಸ್ಕೃತ ಇಂದಿರಾ ಆವಾಸ್ ಯೋಜನೆಯಡಿ 2005–06ರಲ್ಲಿ ಕಡೂರು ತಾಲ್ಲೂಕಿಗೆ 142 ಮನೆಗಳ ಗುರಿಯನ್ನು ನೀಡಲಾಗಿದೆ.